ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೨

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಮಂಗಳವಾರ, ದಿನಾಂಕ: ೧೬ನೇ ಜುಲೈ, ೨೦೧೯

---

**ಸಮೂಹ – II**

೧. ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು.

೩. ಸಣ್ಣ ನೀರಾವರಿ ಸಚಿವರು

೪. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

೫. ವೈದ್ಯಕೀಯ ಶಿಕ್ಷಣ ಸಚಿವರು.

೬. ಉನ್ನತ ಶಿಕ್ಷಣ ಸಚಿವರು

೭. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

---

## ಯು.ಜಿ.ಸಿ. ಅರ್ಹತೆಯುಳ್ಳ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರುಗಳ ಬಡ್ತಿ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) –**

೧೬ (೧೩೪) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ–

(ಅ) ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಮಂಜೂರಾದ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಸಂಖ್ಯೆ ಎಷ್ಟು ;

(ಆ) ಈ ಹುದ್ದೆಗಳಲ್ಲಿ ನೇರ ನೇಮಕಾತಿ ಮತ್ತು ಬಡ್ತಿಗಾಗಿ ಮೀಸಲಿಟ್ಟ ಹುದ್ದೆಗಳೆಷ್ಟು; (ವಿವರ ನೀಡುವುದು)

(ಇ) ಯು.ಜಿ.ಸಿ. ಅರ್ಹತೆಯುಳ್ಳ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕರುಗಳಿಗೆ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಬಡ್ತಿ ನೀಡುವ ಬಗ್ಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ಸರ್ಕಾರ ಮುಂದಾಗುವುದೇ;

(ಈ) ಈ ಬಗ್ಗೆ ಸರ್ಕಾರದ ನಿಲುವೇನು ? (ವಿವರ ನೀಡುವುದು)

## ಪದವಿ ಪೂರ್ವ ಕಾಲೇಜುಗಳಿಗೆ ಹುದ್ದೆಗಳನ್ನು ಮಂಜೂರು ಮಾಡುವ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ)** –

೧೭ (೨೪೩) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಖಾಸಗಿ ಅನುದಾನಿತ ಪದವಿ ಕಾಲೇಜುಗಳಿಂದ ಬೇರ್ಪಟ್ಟ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಪದವಿ ಪೂರ್ವ ಕಾಲೇಜುಗಳ ವಿವರ ನೀಡುವುದು)

(ಆ) ಬೇರ್ಪಟ್ಟ ಪದವಿ ಪೂರ್ವ ಕಾಲೇಜುಗಳಿಗೆ ಪದವಿ ಕಾಲೇಜುಗಳಿಂದ ಹಸ್ತಾಂತರಿಸಿದ ಹುದ್ದೆಗಳು ಎಷ್ಟು ; (ಜಿಲ್ಲಾವಾರು ಹಾಗೂ ಕಾಲೇಜುವಾರು ಮಾಹಿತಿ ನೀಡುವುದು)

(ಇ) ಪದವಿ ಕಾಲೇಜುಗಳಿಂದ ಪದವಿ ಪೂರ್ವ ಕಾಲೇಜುಗಳಿಗೆ ಹಸ್ತಾಂತರ ಮಾಡಿದ ಹುದ್ದೆಗಳಲ್ಲಿ ಎಷ್ಟು ಹುದ್ದೆಗಳನ್ನು ಆಡಳಿತ ಮಂಡಳಿಯವರು ಭರ್ತಿ ಮಾಡಿಕೊಂಡಿರುತ್ತಾರೆ ಹಾಗೂ ಭರ್ತಿ ಮಾಡಿಕೊಳ್ಳದೆ ಉಳಿದ ಹುದ್ದೆಗಳು ಎಷ್ಟು ; (ವಿವರ ನೀಡುವುದು)

(ಈ) ಬೇರ್ಪಟ್ಟ ಪದವಿ ಪೂರ್ವ ಕಾಲೇಜುಗಳಿಗೆ ಹುದ್ದೆಗಳನ್ನು ಹಸ್ತಾಂತರ ಮಾಡಿದ ನಂತರವೂ ಇನ್ನೂ ಮಂಜೂರು ಮಾಡಬೇಕಾದ ಹುದ್ದೆಗಳ ಸಂಖ್ಯೆ ಎಷ್ಟು ; ಈ ಕುರಿತು ಹೊಸ ಹುದ್ದೆಗಳನ್ನು ಮಂಜೂರು ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ಅಂತರ್ಜಲ ವೃದ್ಧಿ ಮತ್ತು ಕುಡಿಯುವ ನೀರಿನ ಸಮಸ್ಯೆ

**ಶ್ರೀ ಎಸ್. ರುದ್ರೇಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೧೮ (೧೫೪) ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಮಳೆಯ ಅನಿಶ್ಚಿತತೆ ಹಾಗೂ ತೀವ್ರ ಅಂತರ್ಜಲ ಕುಸಿತದಿಂದಾಗಿ ಎಲ್ಲಾ ಜಿಲ್ಲೆಗಳಲ್ಲೂ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಂಡಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಮಾಹಿತಿ ಒದಗಿಸುವುದು)

(ಆ) ಅಂತರ್ಜಲ ವೃದ್ಧಿಗೆ ಮನೆಗಳ ಮೇಲ್ಚಾವಣಿ ನೀರನ್ನು ಇಂಗಿಸುವಿಕೆ ಹಾಗೂ ಇತರೆ ಯೋಜನೆಗಳ ಬಗ್ಗೆ ಸರ್ಕಾರದಿಂದ ದೊರೆಯುವ ಸಹಾಯಧನ ಇತ್ಯಾದಿ ಸೌಲಭ್ಯಗಳು ಯಾವುವು ; (ಮಾಹಿತಿ ಒದಗಿಸುವುದು)

(ಇ) ಮಳೆ ನೀರಿನ ಕೊಯ್ಲು ಇತ್ಯಾದಿ ನೀರು ಸಂರಕ್ಷಣಾ ಯೋಜನೆಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಟೀ ನರಸೀಪುರದಲ್ಲಿ ಸಾಂಸ್ಕೃತಿಕ ಭವನ ನಿರ್ಮಾಣ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೯ (೨೫೯) ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮೈಸೂರು ಜಿಲ್ಲೆ ಟೀ ನರಸೀಪುರ ಪಟ್ಟಣದ ಗೋಪಾಲಪುರದಲ್ಲಿ ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ ಸರ್ಕಾರದಿಂದ ಹಣ ಬಿಡುಗಡೆ ಮಾಡಲಾಗಿದೆಯೇ ; ಮಾಡಿದ್ದಲ್ಲಿ, ಯಾವಾಗ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ;

(ಆ) ಟೀ ನರಸೀಪುರದ ಗೋಪಾಲಪುರದಲ್ಲಿ ಕಲೆ, ನಾಟಕ ಸಂಗೀತ ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವವರು ಹೆಚ್ಚಿನ ಸಂಖ್ಯೆಯಲ್ಲಿದ್ದು ಅಲ್ಲಿ ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ ೧೦ ಲಕ್ಷ ಬಿಡುಗಡೆಯಾಗಿದ್ದರೂ ಕಾಮಗಾರಿಯನ್ನು ಪ್ರಾರಂಭಿಸಿಲ್ಲವೆನ್ನುವ ದೂರಿದ್ದು, ಈ ಬಗ್ಗೆ ಸರ್ಕಾರದ ಉತ್ತರವೇನು ;

(ಇ) ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ ಮನರ್ ಮಂಜೂರಾತಿ ನೀಡಿ ೧೦ ಲಕ್ಷ ರೂಪಾಯಿಗಳನ್ನು ಬಿಡುಗಡೆಗೊಳಿಸಿ ಕಾಮಗಾರಿ ಕೈಗೊಳ್ಳಲಾಗುವುದೆ ?

## ರಾಜ್ಯದ ಯುನಾನಿ ವೈದ್ಯಕೀಯ ಕಾಲೇಜುಗಳ ಬಗ್ಗೆ

**ಶ್ರೀ ವಿಜಯ್ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೦ (೨೫೨) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಎಷ್ಟು ಯುನಾನಿ ವೈದ್ಯಕೀಯ ಕಾಲೇಜುಗಳಿವೆ ; (ವಿವರ ನೀಡುವುದು)

(ಆ) ಯುನಾನಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭ ಮಾಡಲು ಇರುವ ಮಾನದಂಡಗಳೇನು ;

(ಇ) ಬೀದರ್ ಜಿಲ್ಲೆಯಲ್ಲಿ ಯುನಾನಿ ವೈದ್ಯಕೀಯ ಕಾಲೇಜು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಪ್ರಾರಂಭಿಸಲಾಗುವುದು ಯಾವಾಗ ?

## ೨೦೧೯–೨೦ನೇ ಸಾಲಿನ ಪ್ರೌಢ ಶಾಲೆಗಳ ನೋಂದಣಿಯ ಬಗ್ಗೆ

**ಶ್ರೀ ಕೆ. ಹರೀಶ್‌ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೨೧ (೨೮೦) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨೦೧೯–೨೦ನೇ ಶೈಕ್ಷಣಿಕ ಸಾಲಿನಲ್ಲಿ ಹೊಸದಾಗಿ ಅನುದಾನ ರಹಿತ ಪ್ರೌಢ ಶಿಕ್ಷಣಕ್ಕೆ (೯ನೇ ಮತ್ತು ೧೦ನೇ ತರಗತಿಗೆ) ಎಷ್ಟು ಶಾಲೆಗಳು ನೋಂದಣಿಗೆ ಅರ್ಜಿ ಸಲ್ಲಿಸಿವೆ ;

(ಆ) ಈಗಾಗಲೇ ನೋಂದಣಿ ನೀಡಿದ ಸಂಸ್ಥೆಗಳ ಸಂಖ್ಯೆ ಎಷ್ಟು ?

## ರಾಯಚೂರು ನಗರ OPEC ಆಸ್ಪತ್ರೆ ಸ್ವಸ್ವಾಯತ್ತ ಸಂಸ್ಥೆ ಬಗ್ಗೆ

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೨ (೧೨೭) ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಯಚೂರು ಪಟ್ಟಣದಲ್ಲಿರುವ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ (ಓಪೆಕ್) ಇದನ್ನು ರಿಮ್ಸ್‌ನಿಂದ ಬೇರ್ಪಡಿಸಿ ಸ್ವಾಯತ್ತ ಸಂಸ್ಥೆಯನ್ನಾಗಿ ಪರಿವರ್ತಿಸಲು ಸರ್ಕಾರ ಕೈಗೊಂಡ ಕ್ರಮವೇನು ; (ವಿವರ ಒದಗಿಸುವುದು)

(ಆ) ಇದರಿಂದ ಹೈದ್ರಾಬಾದ್ ಕರ್ನಾಟಕ ಜನತೆಗೆ ಉನ್ನತ ಚಿಕಿತ್ಸೆ ಪಡೆಯಲು ಸಹಕಾರಿಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಬೀದರ್ ಜಿಲ್ಲೆಯ ಬ್ಯಾರೇಜ್‌ಗಳ ಬಗ್ಗೆ

**ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) –**

೨೩ (೨೩೫) ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೀದರ್ ಜಿಲ್ಲೆಯ ಚೆಂದಾಪುರ, ಜಿರಗ್ಯಾಳ, ಮಾಣಿಕೇಶ್ವರ ಹಾಲಹಳ್ಳಿ, ಬ್ರಿಡ್ಜ್ ಕಂ ಬ್ಯಾರೇಜ್‌ನ ಗೇಟು ಹಾಳಾಗಿರುವುದು ನಿಜವೇ ; ಈ ಬ್ಯಾರೇಜುಗಳಿಗೆ ಅಳವಡಿಸಲಾಗಿರುವ ಗೋಡಬೋಲೆ ಗೇಟುಗಳಲ್ಲಿ ದೋಷ ಕಂಡು ಬಂದಿದೆಯೇ; ಇದ್ದಲ್ಲಿ, ಸಂಬಂಧಿಸಿದ ಗುತ್ತಿಗೆದಾರರ ಮತ್ತು ಅಧಿಕಾರಿಗಳ ವಿರುದ್ಧ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ;

(ಆ) ಗೋದಾವರಿ ಜಲಾನಯನದಲ್ಲಿ ಬೀದರ್ ಜಿಲ್ಲೆಗೆ ಹಂಚಿಕೆಯಾದ ನೀರಿನ ಪ್ರಮಾಣ ಎಷ್ಟು ; ಹಂಚಿಕೆಯಾದ ನೀರು ಬಳಕೆಗೆ ಯಾವ ಯಾವ ಯೋಜನೆಗಳನ್ನು ನಿರ್ಮಿಸಲಾಗಿದೆ ; ಸಂಪೂರ್ಣ ನೀರು ಬಳಕೆಗೆ ಈಗಿರುವ ಯೋಜನೆಗಳು ಸಮರ್ಪಕವೇ ; ಅಥವಾ ಹೊಸ ಯೋಜನೆಗಳನ್ನು ರೂಪಿಸಬೇಕೆ ; ಹಾಗಿದ್ದಲ್ಲಿ, ಸರ್ಕಾರದ ಮುಂದಿರುವ ಕ್ರಮಗಳೇನು ?

## ದೈಹಿಕ ಶಿಕ್ಷಣ ಉನ್ನತೀಕರಣಕ್ಕಾಗಿ ಪ್ರೋ: ವೈದ್ಯನಾಥನ್ ವರದಿ ಬಗ್ಗೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –**

೨೪ (೨೮೬) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ದೈಹಿಕ ಶಿಕ್ಷಣ ಉನ್ನತೀಕರಣಕ್ಕಾಗಿ ಪ್ರೋ: ವೈದ್ಯನಾಥನ್‌ರವರ ವರದಿಗೆ ಸರ್ಕಾರ ಒಪ್ಪಿಗೆ ನೀಡಲಾಗಿದೆಯೇ ;

(ಆ) ಈ ಸಂಬಂಧ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ಸರ್ಕಾರ ತೀರ್ಮಾನಿಸಲಾಗಿದೆಯೇ ;

(ಇ) ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿಯಲ್ಲಿ ಯಾವ ಯಾವ ಅಂಶಗಳಲ್ಲಿ ಬದಲಾವಣೆ ತರಲಾಗಿದೆ ; (ವಿವರ ನೀಡುವುದು)

(ಈ) ತಿದ್ದುಪಡಿ ತರುವಲ್ಲಿನ ವಿಳಂಬಕ್ಕೆ ಕಾರಣಗಳೇನು ; ಯಾವ ಕಾಲಮಿತಿಯಲ್ಲಿ ತಿದ್ದುಪಡಿ ಮಾಡಲಾಗುವುದು ?

## ಸರ್ಕಾರಿ ಕೋಟಾದಲ್ಲಿ ಶಿಕ್ಷಣ ಪಡೆದು ಗ್ರಾಮೀಣ ಸೇವೆ ಮಾಡದ ವೈದ್ಯರುಗಳ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೫ (೨೫೧) ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ಐದು ವರ್ಷಗಳಲ್ಲಿ ಸರ್ಕಾರಿ ಕೋಟಾದಡಿಯಲ್ಲಿ ಪ್ರವೇಶ ಪಡೆದು ಗ್ರಾಮೀಣ ಸೇವೆಯನ್ನು ಮಾಡುವುದಾಗಿ ಮುಚ್ಚಳಿಕೆ ಬರೆದುಕೊಟ್ಟು ಅದನ್ನು ಉಲ್ಲಂಘಿಸಲಾಗಿರುವ ೫೮೯ ವೈದ್ಯರುಗಳ ವಿರುದ್ಧ ದಿನಾಂಕ;೨೦.೦೮.೨೦೧೭ ರಂದು ಕೆ.ಎಂ.ಸಿ.ಗೆ ಪತ್ರ ಬರೆಯಲಾದ ಪ್ರಕರಣದಲ್ಲಿ ಇಲ್ಲಿಯವರೆಗೆ ಆಗಿರುವ ಪ್ರಗತಿಯ ಬಗ್ಗೆ ವಿವರ ನೀಡುವುದು ;

(ಆ) ಷರತ್ತು ಉಲ್ಲಂಘಿಸಿ ಗ್ರಾಮೀಣ ಸೇವೆ ಮಾಡದ ವೈದ್ಯರುಗಳ ಮೇಲೆ ವಿಧಿಸುವ ದಂಡದ ಹಣವನ್ನು ರೂ.೧.೦೦ ಕೋಟಿ ರೂಪಾಯಿಗಳಿಗೆ ಏರಿಸಲು ಸರ್ಕಾರದ ನಿಲುವೇನು ; (ವಿವರ ನೀಡುವುದು)

(ಇ) ಈ ವಿಷಯವಾಗಿ ಸರ್ಕಾರದ ವಿರುದ್ಧ ಹೈಕೋರ್ಟ್ ವಿಷಾಧ ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ; ಇದರ ಬಗ್ಗೆ ಸರ್ಕಾರದ ಕ್ರಮಗಳೇನು ;

(ಈ) ಗ್ರಾಮೀಣ ಸೇವೆಯನ್ನು ಮಾಡದ ವೈದ್ಯರುಗಳ ಮೇಲೆ ನಿಯಮಾಳಿಗಳ ರೀತ್ಯಾ ಸರ್ಕಾರವು ತೆಗೆದುಕೊಂಡ ಕ್ರಮಗಳೇನು ? (ವಿವರ ನೀಡುವುದು)

## ತುಂಗಭದ್ರ ಜಲಾಶಯಕ್ಕೆ ಸಮಾನಾಂತರ ಜಲಾಶಯಗಳ ನಿರ್ಮಾಣ

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೬ (೧೪೯) ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ತುಂಗಭದ್ರೆಗೆ ಸಮಾನಾಂತರ ಜಲಾಶಯ ನಿರ್ಮಾಣದ ಪ್ರಸ್ತಾವನೆ ಯಾವ ಹಂತದಲ್ಲಿದೆ ;

(ಆ) ಈ ಜಲಾಶಯದ ನಿರ್ಮಾಣಕ್ಕೆ ನಿಗಧಿ ಮಾಡಲಾದ ವೆಚ್ಚವೆಷ್ಟು ;

(ಇ) ತುಂಗಭದ್ರೆಗೆ ಸಮಾನಾಂತರ ಜಲಾಶಯವನ್ನು ಯಾವ ಸ್ಥಳದಲ್ಲಿ ನಿರ್ಮಾಣ ಮಾಡಲಾಗುವುದು ;

(ಈ) ಇಲ್ಲಿಯವರೆಗೆ ಈ ವಿಚಾರದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಹಾಗೂ ರೂಪುರೇಷೆಗಳೇನು ?

## ಬಾಗಿಲು ಮುಚ್ಚಿದ ಶುದ್ಧ ನೀರಿನ ಘಟಕಗಳು

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ** (**ವಿಧಾನಸಭೆಯಿಂದ ಚುನಾಯಿತರಾದವರು**)–

೨೭ (೨೨೬) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಪ್ರಾರಂಭದಿಂದ ಇದುವರೆವಿಗೂ ಎಷ್ಟು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ಮಾಣ ಮಾಡಲಾಗಿದೆ ; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಆ) ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ಮಾಣಕ್ಕೆ ಸರ್ಕಾರ ಇದುವರೆಗೂ ಮಾಡಿರುವ ಖರ್ಚು ಎಷ್ಟು ; (ಮಾಹಿತಿ ನೀಡುವುದು)

(ಇ) ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡಿ ಶುದ್ದ ನೀರಿನ ಘಟಕಗಳನ್ನು ನಿರ್ಮಾಣ ಮಾಡಿದಾಗ್ಯೂ ಅವುಗಳು ಸರಿಯಾಗಿ ಕಾರ್ಯನಿರ್ವಹಿಸದೇ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಶುದ್ಧ ನೀರಿನ ಘಟಕಗಳನ್ನು ವ್ಯವಸ್ಥಿತವಾಗಿ ನಿರ್ವಹಿಸದಿರುವುದಕ್ಕೆ ಕಾರಣರಾದವರ ವಿರುದ್ಧ ಸರ್ಕಾರ ಯಾವ ಕ್ರಮಕೈಗೊಂಡಿದೆ ; (ವಿವರ ನೀಡುವುದು)

(ಉ) ಶುದ್ದ ನೀರಿನ ಘಟಕಗಳು ಸ್ಥಾಪನೆಯಾದ ದಿನದಿಂದ ಇದುವರೆಗೂ ಕಾರ್ಯಾರಂಭ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ರಾಜ್ಯದಾದ್ಯಂತ ಈ ರೀತಿ ಕಾರ್ಯಾರಂಭ ಮಾಡದಿರುವ ಘಟಕಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

## ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕುರಿತು

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೮ (೧೫೫) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು 'ಬಿ' ಹುದ್ದೆಗೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ, ಮೇಲ್ದರ್ಜೆಗೇರಿಸುವ ಉದ್ದೇಶ ಹಾಗೂ ಅಗತ್ಯತೆ ಏನು ; (ವಿವರ ಒದಗಿಸುವುದು)

(ಇ) ರಾಜ್ಯದಲ್ಲಿ ಯಾವ ಯಾವ ವಿಧಾನಸಭೆ ಸದಸ್ಯರುಗಳ, ವಿಧಾನ ಪರಿಷತ್ ಸದಸ್ಯರುಗಳ, ಸಚಿವರುಗಳ ಮತ್ತು ಕ್ಯಾಬಿನೆಟ್ ದರ್ಜೆ ಹೊಂದಿರುವವರ ಹತ್ತಿರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ; (ವಿವರ ನೀಡುವುದು)

(ಈ) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು ಯಾವ ವೇತನ ಶ್ರೇಣಿಗೆ ಮೇಲ್ದರ್ಜೆಗೇರಿಸಲಾಗುವುದು ; ಹುದ್ದೆ ಮೇಲ್ದರ್ಜೆಗೇರಿಸಲು ಯಾವುದಾದರೂ ತೊಡಕುಗಳಿವೆಯೇ ; ಇದ್ದಲ್ಲಿ ತೊಡಕುಗಳೇನು ;

(ಉ) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ವರ್ಗಾವಣೆಯನ್ನು (ಶಿಕ್ಷಕರ ವರ್ಗಾವಣೆಯ ರೀತಿಯಲ್ಲಿ) ಕೌನ್ಸಿಲಿಂಗ್ ಮುಖಾಂತರ ಮಾಡುವ ಬಗ್ಗೆ ಸರ್ಕಾರ ಚಿಂತಿಸಿದೆಯೇ ; ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ಒದಗಿಸುವುದು)

## ಪ್ರಾಥಮಿಕ ಮತ್ತು ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಕ/ಉಪನ್ಯಾಸಕರ ವರ್ಗಾವಣೆ ಬಗ್ಗೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೨೯ (೧೪೪) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಶಾಲಾ ಕಾಲೇಜುಗಳ ಶಿಕ್ಷಕ/ಉಪನ್ಯಾಸಕರ ವರ್ಗಾವಣೆ ಪ್ರಕ್ರಿಯೆ/ಕೌನ್ಸಿಲಿಂಗ್ ಮೂಲಕ ಯಾವಾಗ ಮಾಡಲಾಗಿದೆ/ವರ್ಗಾಯಿಸಲಾಗಿದೆ ; ಈ ರೀತಿ ವರ್ಗಾವಣೆಗೊಂಡು ಬಿಡುಗಡೆಗೊಂಡ ಹಾಗೂ ಹಾಜರಾದ ಶಿಕ್ಷಕರ ಸಂಖ್ಯೆ ಎಷ್ಟು ; (ಮಾಹಿತಿ ನೀಡುವುದು)

(ಆ) ಈಗ ವರ್ಗಾವಣೆ ಪ್ರಕ್ರಿಯೆ ನಡೆಸಲು ಇರುವ ಕಾನೂನು ಮಾರ್ಗಸೂಚಿ ಹಾಗೂ ನಿಯಮಗಳು ಯಾವುವು ; (ಪ್ರತಿ ನೀಡುವುದು) ಈಗ ಹೆಚ್ಚುವರಿ ಶಿಕ್ಷಕರ ಪ್ರಕ್ರಿಯೆ ನಡೆಸಿ ಕಡ್ಡಾಯ ವರ್ಗಾವಣೆ ಮಾಡಿ ನಂತರವೇ ಕೋರಿಕೆ ವರ್ಗಾವಣೆ ಮಾಡುವ ನಿಯಮವಿದೆಯೇ ; (ವಿವರಣಾತ್ಮಕ ವಿವರ ನೀಡುವುದು)

(ಇ) ರಾಜ್ಯದಲ್ಲಿ ಪ್ರಾಥಮಿಕ, ಪ್ರೌಢ, ಪದವಿ ಪೂರ್ವ ಹಂತದಲ್ಲಿ ಹೆಚ್ಚುವರಿ ಪ್ರಕ್ರಿಯೆಗೆ ನಿಗದಿಪಡಿಸಿರುವ ವಿದ್ಯಾರ್ಥಿ, ಶಿಕ್ಷಕರ ಅನುಪಾತ ಎಷ್ಟು ; ವರ್ಗಾವಣೆ ಪ್ರಕ್ರಿಯೆಯಲ್ಲಿ ವರ್ಗಾವಣೆಯಿಂದ ರಿಯಾಯಿತಿ, ವಿನಾಯಿತಿ ಕೊಡ ಮಾಡಿರುವ ಸಮೂಹಗಳಾವುವು ; ಅದಕ್ಕೆ ನಿಗದಿಪಡಿಸಿದ ಮಾನದಂಡಗಳೇನು ;

(ಈ) ಅವುಗಳಲ್ಲಿ ನಡೆಯುತ್ತಿರುವ ಬೋಗಸ್ ಪ್ರಮಾಣ ಪತ್ರ ಹಗರಣ ತಡೆಯುವಲ್ಲಿ ಸರ್ಕಾರದ ಕ್ರಮವೇನು ; ಶಿಕ್ಷಕ ಸಂಘಟನೆಗಳ ಪದಾಧಿಕಾರಿಗಳಿಗೆ ವಿನಾಯಿತಿ, ರಿಯಾಯಿತಿ ನೀಡಲಾಗಿದೆಯೇ ? (ಚುನಾಯಿತ ಪದಾಧಿಕಾರಿಗಳು ಅನ್ನುವುದರ ಬಗ್ಗೆ ಸಂಪೂರ್ಣ ವಿವರ ನೀಡುವುದು)

**ರಾಜ್ಯದ ಗಡಿಭಾಗದಲ್ಲಿನ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಬಗ್ಗೆ**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ)–**

೩೦ (೧೪೨) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಗಡಿಭಾಗದ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಗಡಿಭಾಗದ ಜಿಲ್ಲೆಗಳಲ್ಲಿ ಒಟ್ಟಾರೆ ಕೊರತೆ ಇರುವ ಶಿಕ್ಷಕರ ಸಂಖ್ಯೆ ಎಷ್ಟು ;
(ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯಲ್ಲಿ ಇರುವ ಶಿಕ್ಷಕರ ಕೊರತೆ ಎಷ್ಟು ;

(ಈ) ಖಾಲಿ ಇರುವ ಶಿಕ್ಷಕರ ಹುದ್ದೆಗಳ ಭರ್ತಿಗೆ ಕೈಗೊಳ್ಳಲಿರುವ ಕ್ರಮಗಳೇನು ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಪರಿಷತ್ತು

ವಿಧಾನಸೌಧ, ಬೆಂಗಳೂರು, ಪಿ7, ಕಾ.ಸೂ. 257, ಪ್ರತಿಗಳು 400

**List of Questions for Oral Answers**

**Total No. of Questions - 15**

**LIST - 02**

# KARNATAKA LEGISLATIVE COUNCIL

## ONE HUNDRED AND THIRTY EIGHTH SESSION

## Tuesday, the 16th July, 2019

---

### GROUP - II

1. Minister for Major and Medium Irrigation and Kannada and Culture
2. Minister for Rural Development and Panchayat Raj
3. Minister for Minor Irrigation
4. Minister for Health and Family Welfare
5. Minister for Medical Education
6. Minister for Higher Education
7. Minister for Primary and Secondary Education

---

### PROMOTION OF LECTURERS IN GOVERNMENT COLLEGES

**Sri K.T.Srikantegowda (Graduates' Constituency) -**

16 (134) Will the Minister for Higher Education be pleased to state:-

a) the number of Assistant Professors' posts sanctioned in the Government First Grade colleges of the State;

b) out of which, the number of posts reserved for direct recruitment and promotion; (details be furnished)

c) whether the Government would come forward to amend the Cadre and Recruitment rules of the department in connection with promoting the lecturers of Government Pre-university colleges who have U.G.C. eligibility to the posts of Assistant Professor in First Grade colleges;

d) the stand of the Government in this regard? (details be furnished)

**SANCTION OF POSTS TO PRE-UNIVERSITY COLLEGES**

**Sri S.V. Sankanur (Graduates' Constituency) -**

17 (243) Will the Minister for Primary and Secondary Education be pleased to state:-

a) the number of pre-university colleges separated from the private aided degree colleges in the State; (districtwise details of pre university colleges be furnished)

b) the number of posts transferred from the degree colleges to separated pre-university colleges; (districtwise and collegewise information be furnished)

c) the number of posts filled up by the Management Boards out of the posts transferred from the degree colleges to pre-university colleges and the number of vacant posts; (details be furnished)

d) the number of posts to be sanctioned even after transferring the posts to the same; the step taken by the Government for sanctioning new posts in this regard?

**GROUND WATER RECHARGE AND PROBLEM OF DRINKING WATER**

**Sri S. Rudregowda (Elected by Legislative Assembly) -**

18 (154) Will the Minister for Minor Irrigation be pleased to state:-

a) the steps taken by the State Government in the backdrop of that drinking water crisis has been increased in all the districts due to uncertainty of rainfall and severe decline of underground water; (information be furnished)

b) the particulars of facilities like availability of subsidy from the Government towards capturing of roof top water for increasing underground water and other schemes; (information be furnished)

c) the steps taken by the Government regarding schemes of preservation of water like rain water harvesting, etc?

**CONSTRUCTION OF CULTURAL HALL IN T.NARASIPUR**

**Sri R. Dharmasena (Local Authorities Constituency) -**

19 (259) Will the Minister for Major and Medium Irrigation and Kannada and Culture be pleased to state:-

a) whether amount has been released for the construction of cultural hall in Gopalapur of T.Narasipur town of Mysuru district; if so, the amount and the date on which the same has been released;

b) whether the public of Gopalpur of T.Narasipur have been involved in cultural activities like arts, play, music etc more in number and are complainting that there is no commencement of work even though 10 lakh rupees has been released already for the construction of cultural hall, the reply of the Government in this regard;

c) whether the construction of cultural hall will be re-sanctioned and the work would be taken up by releasing 10 lakh rupees?

**UNANI MEDICAL COLLEGES OF THE STATE**

**Sri Vijay Singh (Local Authorities Constituency) -**

20 (252) Will the Minister for Health and Family Welfare be pleased to state:-

a) the number of Unani Medical colleges located in the State; (details be furnished)

b) the criteria prevailing for commencing the Unani Medical college;

c) whether the proposal is before the Government to commence the Unani Medical college in Bidar district; if so, the date on which it would be commenced?

## REGISTRATION OF HIGH SCHOOLS FOR THE YEAR 2019-20

**Sri K. Harish Kumar (Elected by Legislative Assembly) -**

21 (280) Will the Minister for Primary and Secondary Education be pleased to state:-

a) the number of schools that have been submitted application for the registration of new un-aided secondary education ($9^{th}$ and $10^{th}$ standard during the year 2019-20 in Dakshina Kannada district;

b) the number of institutions registered already?

## CONVERSION OF OPEC HOSPITAL OF RAICHUR AS AUTONOMOUS BODY

**Sri Basavaraj Patil Itagi (Local Authorities Constituency) -**

22 (127) Will the Minister for Medical Education be pleased to state:-

a) the steps taken by the Government to separate Rajiv Gandhi Super Speciality Hospital (OPEC) in Raichur town from RIMS and convert into an autonomous body; (details be furnished)

b) whether it has come to the notice of the Government that this will help the people of Hyderabad-Karnataka region to get better treatment?

## BARRAGES IN BIDAR DISTRICT

**Sri Aravind Kumar Arali (Elected by Legislative Assembly) -**

23 (235) Will the Minister for Major and Medium Irrigation and Kannada and Culture be pleased to state:-

a) whether it is true that gates of bridge cum barrage damaged in Chandapur, Jiragyala, Manikeshwara, Halahalli in Bidar district; whether defect has been found in godbole gate installed in such barrages; if so, the action taken by the Government against concerned contractors and officers;

b) the ratio of water allocated to Bidar district in Godavari river basin ; the particulars of the schemes that have been framed to utilise the allocated water; whether existing schemes are adequate to utilise complete water; or whether new schemes have to be chalked out; if so, the steps of the Government in this regard?

## PROF.VAIDHYANATHAN REPORT FOR UPGRADATION OF PHYSICAL EDUCATION

**Sri Marithibbe Gowda (Teachers' Constituency) -**

24 (286) Will the Minister for Primary and Secondary Education be pleased to state:-

a) whether the Government has approved the Prof. Vaidyanathans' report for upgradation of physical education;

b) whether the Government has decided to bring amendment to the Cadre and Recruitment rules in this regard;

c) the particulars of the facts to which changes have been brought in the amendments of Cadre and Recruitment rules; (details be furnished

d) the reasons for delay in bringing amendment; the time limit within which amendment would be brought?

**DOCTORS NOT SERVING AT RURAL AREAS**

**Sri M.P.Sunil Subramani (Local Authorities Constituency) -**

25 (251) Will the Minister for Medical Education be pleased to state:-

a) the details of progress achieved so far in the case in which a letter has been addressed to K.M.C. on 20.08.2017 against 589 doctors who have got admission under Government quota and violated the bond that they will serve at rural areas, for the last 5 years be furnished;

b) the stand of the Government to increase the fine amount to 1.00 crore rupees imposed on the doctors for not serving at rural areas by violating the condition; (details be furnished)

c) whether the Government is not aware about the regretness expressed by the High Court against the Government in this regard; the steps of the Government in this regard;

d) the action taken by the Government as per rules against the doctors who are not serving at the rural areas? (details be furnished)

**CONSTRUCTION OF BALANCING RESERVOIR TO TUNGABHADRA**

**Sri K.C. Kondaiah (Local Authorities Constituency) -**

26 (149) Will the Minister for Major and Medium Irrigation and Kannada and Culture be pleased to state:-

a) the present stage of the proposal of construction of balancing reservoir to Tungabhadra;

b) the estimate cost earmarked for construction of this reservoir;

c) the particulars of the place where it is intended to construct balancing reservoir to Tungabhadra;

d) the measures and outlines taken by the Government in this matter so far?

**NON FUNCTIONING OF POTABLE WATER UNITS**

**Sri Raghunath Rao Malkapure (Elected by Legislative Assembly) -**

27 (226) Will the Minister for Rural Development and Panchayat Raj be pleased to state:-

a) the number of potable water units that have been installed in the State from the beginning till date; (districtwise complete information be furnished)

b) the amount spent by the Government for the construction of potable water units so far; (information be furnished)

c) whether the Government is aware of the fact that the potable water units are not functioning properly even they have been installed after spending thousands crores of rupees; if so, the steps taken by the Government in this regard;

d) the action taken by the Government against those who are responsible for not maintaining potable water units properly; (details be furnished)

e) whether it has come to the notice of the Government that the potable water units are not functioning from the beginning till date; the number of such units which are not functioning across the State? (districtwise complete information be furnished)

## PANCHAYAT DEVELOPMENT OFFICERS

**Sri M.K. Pranesh (Local Authorities Constituency) -**

28 (155) Will the Minister for Rural Development and Panchayat Raj be pleased to state:-

a) the number of Panchayat Development Officers working at present in the State; (districtwise information be furnished)

b) whether the proposal of upgrading the Panchayat Development Officer post to group 'B' is before the Government; if so, the details of purpose and necessity of upgrading; (details be furnished)

c) the particulars of M.L.A.s, M.L.Cs, Ministers and Cabinet grade ministers with whom the Panchayat Development Officers are working; (details be finished)

d) the payscale to which the post of Panchayat Development Officers would be upgraded; the abstacles for upgrading the posts; if so, the particulars of the same;

e) whether the Government is intended to conduct the transfer process of Panchayat Development Officers through councelling (in the lines of transfer of teachers); if so, the steps taken by the Government in this regard? (details be furnished)

## TRANSFER OF TEACHERS/LECTURERS OF PRIMARY, SECONDARY AND PRE-UNIVERSITY

**Sri Arun Shahapur (Teachers' Constituency) -**

29 (144) Will the Minister for Primary and Secondary Education be pleased to state:-

a) the date on which transfer of teachers/lecturers of Primary, Secondary and Pre-university has been conducted through transfer process/counselling in the State; the number of teachers who have relieved and reported after transfer so far; (information be furnished)

b) the particulars of prevailing legal guidelines and rules for conducting transfer process; (copy be furnished) whether there is a rules to make transfer on request after conducting compulsory transfer of additional teachers; (complete details be furnished)

c) the ratio of students and teachers prescribed for the additional process at the Primary, Secondary and Pre university in the State; the particulars of categories which have got relaxation and exemption from transfer in transfer process; the criteria prescribed therefor;

d) the measures of the Government in controlling the scandal of bogus certificates in such process; whether relaxation and exemption have been given to office bearers of teachers' organisations?(complete details about elected office bearers be furnished)

## SHORTAGE OF TEACHERS IN BORDER AREA SCHOOLS OF THE STATE

**Sri Basavaraj Shivalingappa Horatti (Teachers' Constituency) -**

30 (142) Will the Minister for Primary and Secondary Education be pleased to state:-

a) whether it has come to the notice of the Government that there is shortage of teachers in border area schools of the State;

b) the total number of shortage of teachers in the border districts; (districtwise information be furnished)

c) the number of shortage of teachers in the Chikkodi Educational district;

d) the steps that would be taken by the Government to fill up the vacant posts of teachers?

**K.R. MAHALAKSHMI**
Secretary (I/c)
Karnataka Legislative Council.

Vikasa Soudha, Bengaluru, P7, wd 254, 400 Copies